ಶ್ರೀ ಆರ್. ಎಸ್. ಪಾಟೀಲ್.—ರಾಮದುರ್ಗ ಪಟ್ಟಣದಲ್ಲಿ 19-1-1965ನೇ ದಿನ ಬೆಂಕಿ ಅನಾಹುತ ಸಂಭವಿಸಿದ್ದು ಇದರಲ್ಲಿ ತೊಂದರೆ ಗೀಡಾದವರಿಗೆ ಪರಿಹಾರ ಕೊಡುವ ವಿಚಾರವನ್ನು ಪರಿಶೀಲಿಸಲಾಗುತ್ತಿದೆ ಎಂದು ಉತ್ತರ ಹೇಳಿದೆ. ಈ ಅನಾಹುತ ನಡೆದು 10-15 ದಿನ ಕಳೆದು ಹೋದರೂ ಕೂಡ ಯಾವ ಪರಿಹಾರವನ್ನೂ ಕೊಟ್ಟಿಲ್ಲ. ಹಾಗಾದರೆ ಇನ್ನೂ ಎಷ್ಟು ದಿನ ಈ ವಿಷಯ ಪರಿಶೀಲನೆ ಮಾಡುತ್ತೀರಿ ?

ಶ್ರೀ ಆರ್. ಎಂ. ಪಾಟೀಲ್.—ಇದರಲ್ಲಿ ಎರಡು ಪ್ರಶ್ನೆ ಉದಕವಾಗಿವೆ. ಈ ಬೆಂಕಿ ಅನಾಹುತ ದಲ್ಲಿ 2 ಎತ್ತು, 4 ಎಮ್ಮೆ ಸತ್ತಿವೆ. ಒಟ್ಟಿಗೆ ನುಮಾರು 15,085 ರೂಪಾಯಿ ಪ್ರಾಪರ್ಟಿ ನಷ್ಟ ವಾಗಿದೆ. ಲುಕ್ಸಾನವಾದದ್ದಕ್ಕೆಲ್ಲಾ ಪರಿಹಾರ ಕೊಡಲು ಆಗುವುದಿಲ್ಲ. ಎಷ್ಟು ಪರಿಹಾರ ಕೊಡ ಬೇಕು ಎನ್ನುವುದು ವಿಚಾರ ಮಾಡ ಬೇಕಾಗುತ್ತದೆ. ಅದು ವಿಚಾರದಲ್ಲಿದೆ. ನಿರ್ದಿಷ್ಟವಾಗಿ ಉತ್ತರ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಫೈನಾನ್ಷಿಯರ್ ಸ್ಟ್ರಿಂಜಿನ್ಸಿ ಮೂಲಕ ನರಕಾರ ಹತ್ತಿಪ್ಪತ್ತು ರೂಪಾಯಿ ಪರಿಹಾರ ಒಬ್ಬ ವ್ಯಕ್ತಿಗೆ ಕೊಡುತ್ತಾರೆ. ಈ ಅಲ್ಪ ಪರಿಹಾರದಿಂದ ಉಪ ಯೋಗವಾಗುವುದಿಲ್ಲ. ಈಗ ಕೊಡುವ ಪರಿಹಾರದ ನಾಲ್ಕರಷ್ಟಾದರೂ ಕೊಡಬೇಕು. ಆದುದ ರಿಂದ ಕೊಡತಕ್ಕಂಥ ಪರಿಹಾರವನ್ನು ಜಾಸ್ತಿ ಮಾಡುವುದಕ್ಕೆ ಖಚಿತವಾಗಿ ಪ್ರಯತ್ನ ಏನಾದರೂ ಮಾಡುತ್ತೀರಾ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಆರ್. ಎಂ. ಪಾಟೀಲ್.—ಈ ಪ್ರಶ್ನೆ ಉದ್ಭವವಾಗುವುದಿಲ್ಲ.

Sri H. R. KESAVA MURTHY.—It is an important question. I beseach your protection to elicit an answer from that Minister.

Mr. SPEAKER.—Sri H. R. Keshava Murthy is such an innocent member that he requires proteetion from me. He says in view of to financial stringency—of the people or the Government—I do not know.....

Sri R. M. PATIL.—With all his earnestness, his suggestion cannot be considered now and it is not easy to answer now.

Mr. SPEARER.—Questions Hour is over.

QUESTOINS FOR ANSWERS ON THE DAY

(but not taken up)

Appointment of Menials for Primary and Middle Schools.

*Q—197. Sri R. KENCHAPPA (Pavagada).—

Will the Government be pleased to state :—

(*a*) whether they have issued orders not to make fresh appointments of menials (male or female) for Primary and Middle Schools in Education Department ;

(*b*) if so, whether they would revise the said order and appoin these servants to the schools wherever necessary ?

A.—Sri S. R. KANTHI (Minister for Education).—

(*a*) Yes.
(*b*) No.